ದಿನಾಂಕ:05-08-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಪಿ ವಕೀಲರಿಂದಃ

ನನ್ನ ತಂದೆಯ ತಂದೆಯ ಹೆಸರು ಮರಿಯಪ್ಪ. ಅವರು ಈಗ ತೀರಿ ಹೋಗಿರುತ್ತಾರೆ. ನನ್ನ ತಂದೆಯ ತಾಯಿಯ ಹೆಸರು ಪುಟ್ಟಮ್ಮ. ಅವರು ಕೂಡಾ ತೀರಿ ಹೋಗಿರುತ್ತಾರೆ. ಸದರಿ ಮರಿಯಪ್ಪನವರಿಗೆ ಎಷ್ಟು ಜಮೀನು ಇತ್ತು ಎಂದರೆ ಸಾಕ್ಷಿಯು ನಾನು ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ಮರಿಯಪ್ಪನವರಿಂದ 1ನೇ ಪ್ರತಿವಾದಿಗೆ ಯಾವ ಸ.ನಂಬರ್ ಜಮೀನು ಬಂದಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯ ತಂದೆಗೆ ಎಷ್ಟು ಜಮೀನು ಇತ್ತು ಮತ್ತು ಯಾವ ಯಾವ ಸ.ನಂಬರ್ ನ ಜಮೀನುಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಮರಿಯಪ್ಪನವರಿಂದ 1ನೇ ಪ್ರತಿವಾದಿಗೆ ಹುಣಸೂರು ತಾಲ್ಲೂಕಿನ, ಹನಗೋಡು ಹೋಬಳಿಯ ಚೆನ್ನಸೋಗೆ ಗ್ರಾಮದ ಸ.ನಂಃ 48/2 ರಲ್ಲಿ 5 ಗುಂಟೆ ಜಮೀನು ಬಂದಿದೆ ಎಂದರೆ ಸಾಕ್ಷಿಯು ಯಾವುದೂ ಜಮೀನು ಸಹ ಬಂದಿಲ್ಲ ಎಂದು ನುಡಿಯುತ್ತಾರೆ. ಸ.ನಂಃ 48/2 ಮಾತ್ರ ಪಿತ್ರಾರ್ಜಿತ ಎಂದರೆ ಸಾಕ್ಷಿಯು ಎಲ್ಲಾ ಆಸ್ತಿಯ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಎಲ್ಲಾ ಆಸ್ತಿ ಯಾವ ಯಾವವು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸ.ನಂಃ 48/2 ರಲ್ಲಿ 5 ಗುಂಟೆ ಜಮೀನಿನಲ್ಲಿ 2 ವರೆ ಗುಂಟೆ ನನಗೆ ಹಾಗೂ 2 ವರೆ 7ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಯಾವ ಜಮೀನು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

2ನೇ ಪ್ರತಿವಾದಿಯ ಗಂಡ ಕುಮಾರ ನನ್ನ ತಮ್ಮನಾಗಬೇಕು. ಸದರಿಯವರು ಐದಾರು ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಅವರು ಜೀವಿತ ಕಾಲದಲ್ಲಿ 6ನೇ ಪ್ರತಿವಾದಿ, 2ನೇ ಪ್ರತಿವಾದಿ ಗಂಡ, 1ನೇ ಪ್ರತಿವಾದಿ ಹಾಗೂ 6ನೇ ಪ್ರತಿವಾದಿಗಳು ಬೇರೆ ಬೇರೆಯಾಗಿ ವಾಸವಾಗಿದ್ದರು. ಆಗ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸ.ನಂಃ48/2 ರ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. ಸ.ನಂಃ48/2 ರ ಜಮೀನನ್ನು ನಾನು ಹಾಗೂ 7ನೇ ಪ್ರತಿವಾದಿ ವಿಭಾಗ ಮಾಡಿಕೊಂಡಿದ್ದರಿಂದ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಭಾಗವಾದ ಸಂದರ್ಬದಲ್ಲಿ ಇನ್ನಿತರೆ ಚರ ಸ್ವತ್ತುಗಳನ್ನು ನಿಮಗೆ ವಿಭಾಗದ ಮೂಲಕ ಬಂದಿದ್ದವು ಎಂದರೆ ಸಾಕ್ಷಿಯು ಯಾವುದೇ ಸ್ವತ್ತುಗಳು ಬಂದಿಲ್ಲ

ಎಂದಿದ್ದಾರೆ. ದಾವಾ ಆಸ್ತಿಯ ಐಟಂ ನಂಃ 2 ನ್ನು ಹೊರೆತುಪಡಿಸಿ ಇನ್ನುಳಿದ ಎಲ್ಲಾ ಆಸ್ತಿಗಳು ಸಣ್ಣಪ್ಪನವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಎಲ್ಲಾ ದಾವಾ ಸ್ವತ್ತುಗಳು ಕ್ರಯಪತ್ರದ ಮೂಲಕ 1ನೇ ಪ್ರತಿವಾದಿಗೆ ಬಂದಿರುತ್ತವೆ ಎಂದರೆ ಸಾಕ್ಷಿಯು ನಮ್ಮ ತಾತನ ಮೂಲಕ ಬಂದಿರುತ್ತವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿದದರಿಂದ, ಯಾವುದೇ ಕ್ರಯಪತ್ರ ಹಾಜರುಪಡಿಸಿಲ್ಲ. ಎಲ್ಲಾ ಆಸ್ತಿಗಳು ನನ್ನ ತಾತನಿಂದ ಬಂದಿರುತ್ತವೆ ಎನ್ನುವುದಕ್ಕೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಆದರೆ ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ.

ದಾವಾ ಐಟಂ ನಂಃ 2 ಒಂದನೇ ನೇ ಪ್ರತಿವಾದಿಯ ಮನೆತನಕ್ಕೆ ಸೇರಿದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ನಾನು, 1ನೇ ಪ್ರತಿವಾದಿ, 2ನೇ ಪ್ರತಿವಾದಿ, 6 ನೇ ಪ್ರತಿವಾದಿ ಹಾಗೂ 7ನೇ ಪ್ರತಿವಾದಿ ಈಗಾಗಲೇ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 6ನೇ ಪ್ರತಿವಾದಿಯ ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಾರೆ ಎಂದರೆ ಸರಿ. 2ನೇ ಪ್ರತಿವಾದಿಯೂ ಸಹ ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿಗೆ ವಯಸ್ಸಾಗಿದ್ದರಿಂದ, ಅವರು ಸಹ ಮನೆಯಲ್ಲಿಯೇ ಇದ್ದು, ಜೀವನ ಸಾಗಿಸುತ್ತಿದ್ದಾರೆ ಎಂದರೆ ಸರಿ. ಸದರಿಯವರು ಎಲ್ಲರೂ ಅವಿದ್ಯಾವಂತರಾಗಿದ್ದರಿಂದ, ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿಲ್ಲ, ಅದರ ಸದುಪಯೋಗಪಡಿಸಿಕೊಂಡು ಸದರಿಯವರ ವಿರುದ್ದ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.
ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.